2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**118/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ವಿಜು | ಪಿಡಬ್ಲ್ಯೂ - 5 |
| ತಂದೆಯ ಹೆಸರು | - | ವರ್ಗೀಸ್ | ಸಿಡಬ್ಲ್ಯೂ - 8 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | Electronic ಕೆಲಸ | |
| ವಾಸ ಸ್ಥಳ | - | ಮತ್ತಿಮರ, ಎನ್.ಆರ್. ಪುರ | |

ದಿನಾಂಕಃ 15-03-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನ್ಯಾಯಾಲಯದ ಮುಂದಿರುವ ಸದರಿ ಆರೋಪಿಗಳನ್ನು ಮಹಜರ್ ಸಮಯದಲ್ಲಿ ಕರೆದುಕೊಂಡು ಬಂದಾಗ ನೋಡಿರುತ್ತೇನೆ. ನನಗೆ ಪ್ರಸೀದ್ ಗೊತ್ತು. ನಮ್ಮ ಮನೆಗೂ ಮತ್ತು ಪ್ರಸೀದ್ ರವರ ಮನೆಗೂ ಸುಮಾರು ಅರ್ಧ ಪರ್ಲಾಂಗ ದೂರ ಇರುತ್ತದೆ. ಸುಮಾರು 4 ವರ್ಷಗಳ ಹಿಂದೆ ಒಂದು ದಿನ ಪ್ರಸೀದ್ ರವರು ರಾತ್ರಿ ಸುಮಾರು 10 ರಿಂದ 11.00 ಗಂಟೆ ಸುವಯದಲ್ಲಿ ನಮ್ಮ ಮನೆಯ ಹತ್ತಿರ ಬಂದಿದ್ದರು. ನಾನು ಅವರನ್ನು ನೋಡಿದ ಸಮಯದಲ್ಲಿ ಅವರ ತಲೆ ಮತ್ತು ಕೈಯಲ್ಲಿ ರಕ್ತ ಬರುತ್ತಿತ್ತು.

2. ನಂತರ ನಾನು, ವಿಲ್ಸ್ ನ್, ತಂಗಚ್ಚನ್ ಪ್ರಸೀದ್ ರವರನ್ನು ಕರೆದುಕೊಂಡು ನನ್ನ ವಾಹನದಲ್ಲಿ ಎನ್.ಆರ್. ಪುರ ಪೊಲೀಸ್

ಠಾಣೆಗೆ ಮತ್ತು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ.

3. ನಾನು ಪ್ರಸೀದ್ ರವರಿಗೆ ನಾನು ಯಾಕೆ ಗಾಯವಾಯಿತು ಎಂದು ಕೇಳಿದಾಗ ಅವರು ಯೊರೋ ಬಂದು ನನ್ನನ್ನು ಹೊಡೆದರು, ಅವರು ಯಾರು ಎಂದು ನನಗೆ ಗೊತ್ತಾಗಲಿಲ್ಲ ಎಂದು ಹೇಳಿದರು. ಸದರಿ ಘಟನೆಯು ಅವರ ಮನೆಯಲ್ಲಿ ಆಯಿತು ಎಂದು ಹೇಳಿರುತ್ತಾರೆ. ಅವರ ಮೇಲೆ ಯಾರು ಹಲ್ಲೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಯಾರಾದರು ಬಂದು ಪ್ರಸೀದ್ ರವರ ಮನೆಗೆ ಬಂದು ನಮಗೆ ಸಸಿ ಬೇಕು ಎಂದು ಕೇಳಿ ಒಳಗಡೆ ಬಂದು ಹಲ್ಲೆ ಮಾಡಿದ್ದಾಗಲಿ ಅಥವಾ ದರೋಡೆ ಮಾಡಿದ್ದಾಗಲಿ ನನ್ನ ಮುಂದೆ ಪ್ರಸೀದ್ ರವರು ಹೇಳಿಲ್ಲ. ಈ ಕುರಿತಂತೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ನಂತರ ಪೊಲೀಸರು ನಮಗೆ ಠಾಣೆಗೆ ಕರೆಸಿಲ್ಲ ಮತ್ತು ಆರೋಪಿತರನ್ನು ನಮಗೆ ತೋರಿಸಿಲ್ಲ, ಅವರನ್ನು ನೋಡಿ ಗುರುತಿಸಿಲ್ಲ ಮತ್ತು ಅವರು ನಮ್ಮ ಮುಂದೆ ಘಟನೆಯ ವಿಷಯವನ್ನು ಹೇಳಿಲ್ಲ. ಈ ಕುರಿತು ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿಲ್ಲ. ಘಟನೆಯ ಬಗ್ಗೆ ನನಗೇನು ಗೊತ್ತಿಲ್ಲ.

(ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಅಭಿಯೋಜಕರಿಂದಃ-

4. ಈಗ ಓದಿ ತೋರಿಸಿದಂತೆ ದಿಃ 02.11.2015 ರಂದು ಪೊಲೀಸರ ಮುಂದೆ ಘಟನೆಯ ಕುರಿತು ಹೇಳಿಕೆ ನೀಡಿ, ಸದರಿ ಹೇಳಿಕೆಯಲ್ಲಿ

ನಾವು ಚಾಸಾ.1 ರವರನ್ನು ವಿಚಾರಿಸಲಾಗಿ ಸದರಿಯವರು ದಿಃ 28.10.2015 ರಂದು ರಾತ್ರಿ 10.00 ಗಂಟೆಗೆ ಇಬ್ಬರು ಅಪರಿಚಿತ ವ್ಯಕ್ತಿಗಳು ಮನೆಯ ಹತ್ತಿರ ಬಂದು ರಬ್ಬರ್ ಸಸಿ ಬೇಕು ಸಿಗುತ್ತದೆಯ ಎಂದು ಕೇಳಿದರು ಅದಕ್ಕೆ ಪ್ರಸೀದ್ ರವರು ಒಂದಕ್ಕೆ 50 ರೂ. ಆಗುತ್ತದೆ ಎಂದು ಹೇಳಿದರು. ನಂತರ ಸದರಿ ಇಬ್ಬರು ವ್ಯಕ್ತಿಗಳು ನೀರು ಕುಡಿಯಲು ಕೇಳಿದ್ದು, ಚಾಸಾ.1 ರವರು ನೀರು ತರಲು ಒಳಗೆ ಹೋದಾಗ ಅವರನ್ನು ಬೆದರಿಸಿದಾಗ ಚಾಸಾ.1 ರವರು ಹಣ ಇಲ್ಲ ಎಂದು ಹೇಳಿದ್ದಾಗ ಸದರಿ ಇಬ್ಬರು ವ್ಯಕ್ತಿಗಳು ಲಾಂಗ್ ನಿಂದ ಪ್ರಸೀದ್ ರವರಿಗೆ ಹಣ್ಣೆಯ ಹತ್ತಿರ ಹೊಡೆಯಲು ಬಂದಾಗ ಎಡಗೈ ಅಡ್ಡ ಇಡಿದಿದ್ದರಿಂದ ಅವರ ಹಣೆ ಮತ್ತು ಎಡಗೈಗೆ ರಕ್ತಗಾಯವಾಗಿರುತ್ತದೆ. ಹಾಗೂ ಸದರಿ ವ್ಯಕ್ತಿಗಳು ಟಿ.ವಿ. ಕಂಪ್ಯೂಟರ್ ಗಳನ್ನು ದರೋಡೆ ಮಾಡಿರುತ್ತಾರೆ ಎಂದು ತಿಳಿಸಿದರು ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.14 ಎಂದು ಗುರುತಿಸಲಾಯಿತು.

5. ಅದೇ ರೀತಿ ದಿಃ 17.11.2015 ರಂದು ನಾನು ಘಟನೆಯ ಕುರಿತು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಮರು ಹೇಳಿಕೆಯಲ್ಲಿ ನಾನು ಈಗ ನ್ಯಾಯಾಲಯದ ಮುಂದಿರುವ 1 ರಿಂದ 6 ಆರೋಪಿತರ ಹೆಸರುಗಳನ್ನು ತಿಳಿದುಕೊಂಡಿರುತ್ತೇನೆ. ಸದರಿಯವರೇ ಪ್ರಸೀದ್ ರವರ ಮನೆಯಲ್ಲಿ ಟಿ.ವಿ., ಕಂಪ್ಯೂಟರ್ ಮಾನಿಟರ್, ಕಂಪ್ಯೂಟರ್

ಸಿ.ಪಿ.ಯು, 2 ಸ್ಪೀಕರ್, 2 ಕರಂಟ್ ಇಂಡಕ್ಷನ್ ಸ್ಟವ್, ಒಂದು Emergency light ಮತ್ತು ಚಾಸಾ.1 ರವರ ಕಾರ್ಬನ್ ಮೊಬೈಲ್ ಇವುಗಳನ್ನು ಆರೋಪಿತರೇ ದರೋಡೆ ಮಾಡಿಕೊಂಡು ಹೋಗಿರುವ ವಿಷಯ ಗೊತ್ತಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಈ ಕುರಿತು ನಿ.ಪಿ.15 ರಂತೆ ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನನಗೆ ನಿ.ಪಿ.14 ಮತ್ತು 15 ರ ವಿಷಯ ಖುದ್ದು ಗೊತ್ತಿದ್ದರು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಹೆಚ್.ಎ.ಟಿ. ವಕೀಲರಿಂದ – 1 ರಿಂದ 5 ನೇ ಆರೋಪಿತರ ಪರವಾಗಿ</u>

6. ನಮ್ಮ ಮನೆಗೂ ಪ್ರಸೀದ್ ರವರ ಮನೆಗೂ ಸುಮಾರು ಅರ್ಧ ಪರ್ಲಾಂಗ ದೂರ ಆಗುತ್ತದೆ. ಆ ದಿನ ಪ್ರಸೀದ್ ರವರು ನಮ್ಮ ಮನೆಗೆ ಬಂದರು ಮತ್ತು ಅವರ ರಕ್ತ ಸುರಿಯುವ ತಲೆಯನ್ನು ನೋಡಿ ನಾವು ಅವರನ್ನು ಎನ್.ಆರ್. ಪುರ ಪೊಲೀಸ್ ಠಾಣೆ ಮತ್ತು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಸುಳ್ಳು ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – 6 ನೇ ಆರೋಪಿತರ ಪರವಾಗಿ</u>

7. 1 ನೇ ಆರೋಪಿತರ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ